ಮಾನ್ಯ ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ನಾಗಮಂಗಲ.

ಉಪಸ್ಥಿತರು
ಶ್ರೀ ಕೆ.ಪಿ. ಸಿದ್ದಪ್ಪಾಜಿ. ಬಿ.ಎ,. ಎಲ್.ಎಲ್.ಬಿ.
ಮಾನ್ಯ ಅಪರ ದಿವಾನಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ.

**ದಿನಾಂಕ:16 ನೇ ಜುಲೈ 2024**

**ಸಿ.ಸಿ.ಸಂಖ್ಯೆ 3/2021**

ಪಿರ್ಯಾದಿ : ಯೋಗೇಶ ಎಂ.ಜೆ.

(ಪ್ರತಿನಿಧಿಸುವವರುಃ ಶ್ರೀ ಜೆ. ಕೆ.ಆರ್. ವಕೀಲರು)

-: ವಿರುದ್ಧ :-

ಆರೋಪಿ : ಪವಿತ್ರ ಹಚ್.ಸಿ.

(ಪ್ರತಿನಿಧಿಸುವವರುಃ ಶ್ರೀ ಡಿ.ಆರ್.ಎಂ, ವಕೀಲರು)

* * * * *

ದಂಡ ಪ್ರಕ್ರೀಯಾ ಸಂಹಿತೆ ಕಲಂ 311 ರ ಅರ್ಜಿಯ
ಮೇಲಿನ ಆದೇಶ

ಮಾನ್ಯ ಪಿರ್ಯಾದಿ ಪರ ವಕೀಲರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, ಪಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಅನುಮತಿಯನ್ನು ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ.

ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

2. ಪಿರ್ಯಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ - 1 ಎಂದು ವಿಚಾರಣೆಗೆ ಒಳಪಡಿಸಿಕೊಂಡು ನಿಶಾನೆಯಾಗಿ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಈಗ ಪ್ರಕರಣವು ವಾದ ಮಂಡನೆಗೆ ಇದ್ದು, ಆದರೆ ದಾಖಲೆಗಳ ಕೊರತೆಯಿಂದ ಕೆಲವು ಮುಖ್ಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಲು ಆಗಿರುವುದಿಲ್ಲ. ಆದರೆ ಈಗ ಸದರಿ ದಾಖಲೆಗಳು ದೊರಕಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲು ಪಿ.ಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಗೆ ಪುನಃ ಕರೆಯಲು ಅವಶ್ಯಕತೆ ಇರುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಆರೋಪಿಯ ಪರ ವಕೀಲರು ಪ್ರಸ್ತುತ ಅರ್ಜಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅದರಲ್ಲಿ ಅರ್ಜಿಯ ಜೊತೆ ಸಲ್ಲಿಸಿರುವ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದಾಗಿರುವುದಿಲ್ಲ. ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿರುತ್ತಾರೆ. ಪಾಟೀ ಸವಾಲಿನಲ್ಲಿ ಪಿರ್ಯಾದಿಯ ಆರ್ಥಿಕ ಸಾಮರ್ಥ್ಯದ ಬಗ್ಗೆ ಪ್ರಶ್ನೆಯನ್ನು ಮಾಡಿದ್ದು, ಅದಕ್ಕಾಗಿ ಈಗ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರು ಪಡಿಸುತ್ತಿದ್ದಾರೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಿ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ಪರ ಹಾಜರಾಗುವ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

1. ಪಿರ್ಯಾದಿಯ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯು ಪುರಸ್ಕರಿಸಲು ಅರ್ಹವೆ?

2. ಯಾವ ಆದೇಶ?

6. ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ -

| | | |
|---|---|---|
| ಅಂಶ 1 | : | ಸಕಾರಾತ್ಮಕವಾಗಿ. |
| ಅಂಶ 2 | : | ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ. |

<u>ಕಾ ರ ಣ ಗ ಳು</u>

7. <u>ಅಂಶ ಸಂಖ್ಯೆ-**1:-**</u> ಪ್ರಸ್ತುತ ಪ್ರಕರಣವನ್ನು ಪಿರ್ಯಾದುದಾರರು ಆರೋಪಿಯ ವಿರುದ್ಧ ವರ್ಗಾವಣೆ ಲಿಖಿತ ಕಾಯ್ದೆ ಕಲಂ 138 ರಡಿಯಲ್ಲಿ ಸಲ್ಲಿಸಿರುತ್ತಾರೆ. ಪಿರ್ಯಾದಿಯ ಪರ ವಾದ ಮಂಡನೆಗೆ ಪ್ರಕರಣವನ್ನು ಕಾಯ್ದಿರಿಸಿರುವಾಗ ಪಿರ್ಯಾದಿಯ ಪರ ವಕೀಲರು ಪ್ರಸ್ತುತ ಅರ್ಜಿಯನ್ನು

ಸಲ್ಲಿಸಿರುತ್ತಾರೆ. ತಮ್ಮ ಅರ್ಜಿಯಲ್ಲಿ, ಹೇಳುವುದೇನೆಂದರೆ ದಾಖಲೆಗಳು ಲಭ್ಯವಾಗದ ಕಾರಣ ಪಿರ್ಯಾದಿಯ ವಿಚಾರಣೆ ವೇಳೆಯಲ್ಲಿ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಲಾಗಿರುವುದಿಲ್ಲ. ಆದರೆ ಈಗ ದಾಖಲೆಗಳು ದೊರಕಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸಲು ಪಿ.ಡಬ್ಲ್ಯೂ- 1 ರವರನ್ನು ಮುಂದುವರೆದ ಮುಖ್ಯ ವಿಚಾರಣೆಗೆ ಪುನಃ ಕರೆಯುವುದು ಅವಶ್ಯಕತೆ ಇರುತ್ತದೆ ಎಂದು ಹೇಳಿರುತ್ತಾರೆ.

8. ಈ ಪ್ರಸ್ತುತ ಅರ್ಜಿಗೆ ಆರೋಪಿಯ ಪ್ರಮುಖ ಆಕ್ಷೇಪಣೆ ಏನೆಂದರೆ ಪಿರ್ಯಾದಿಯು ಅರ್ಜಿಯ ಜೊತೆ ಹಾಜರು ಪಡಿಸಿರುವ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ. ಪಿ.ಡಬ್ಲ್ಯೂ- 1 ರವರನ್ನು ಆರ್ಥಿಕ ಸಾಮರ್ಥ್ಯದ ಬಗ್ಗೆ ಪ್ರಶ್ನೆ ಮಾಡಿರುವುದರಿಂದ ಈಗ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದಾರೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಿ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

9. ಪಿ.ಡಬ್ಲ್ಯೂ - 1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಆರೋಪಿಯು ನಿರ್ಧಿಷ್ಟವಾಗಿ ಪಿರ್ಯಾದಿಯ ಆರ್ಥಿಕ ಸಾಮರ್ಥ್ಯದ ಬಗ್ಗೆ ತಮ್ಮ ಪ್ರತಿ ರಕ್ಷಣೆಯನ್ನು ತೆಗೆದುಕೊಂಡಿರುವುದು ಕಂಡು ಬರುತ್ತದೆ. ಪ್ರಸ್ತುತ ಪ್ರಕರಣವು ಚೆಕ್ ಪ್ರಕರಣಕ್ಕೆ ಸಂಬಂಧಿಸಿದ್ದಾಗಿರುವುದರಿಂದ ಪಿರ್ಯಾದಿಯು ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಹೊಂದಿರುತ್ತಾರೆಂದು ರುಜುವಾತು ಪಡಿಸುವ ಹೊಣೆಗಾರಿಕೆ ಪಿರ್ಯಾದಿಯ ಮೇಲೆ ಇರುತ್ತದೆ. ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಿ ಪಿರ್ಯಾದಿಯ ಆರ್ಥಿಕ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಲು ಅವಕಾಶ ಮಾಡಿ ಕೊಟ್ಟಿಲ್ಲದಿದ್ದಲ್ಲಿ ಆರೋಪಿಗಿಂತ ಪಿರ್ಯಾದಿಗೆ ಹೆಚ್ಚು ತೊಂದರೆಯಾಗುತ್ತದೆ. ಅಲ್ಲದೆ ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸದಿದ್ದರೆ ಬಹು ವ್ಯಾಜ್ಯಕ್ಕೆ ಕಾರಣವಾಗುತ್ತದೆ. ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸುವುದರಿಂದ ಆರೋಪಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಆರೋಪಿಗೆ ಪಿ.ಡಬ್ಲ್ಯೂ-1 ರವರನ್ನು ದಾಖಲೆಗೆ ಸಂಬಂಧಿಸಿದಂತೆ ಪಾಟೀ ಸವಾಲು ಮಾಡುವ ಅವಕಾಶವನ್ನು ಹೊಂದಿರುತ್ತಾರೆ. ಆದ್ದರಿಂದ ಪಿರ್ಯಾದಿಯ ಪರ ವಕೀಲರು ಸಲ್ಲಿಸಿರುವ ಪ್ರಸ್ತುತ ಅರ್ಜಿಯು ಪುರಸ್ಕರಿಸಲು ಅರ್ಹವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದು ಅಂಶ ಸಂಖ್ಯೆ-1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ.

10. <u>ಅಂಶ-**2**</u> :- ಈ ಮೇಲ್ಕಂಡ ಕಾರಣಗಳಿಗಾಗಿ ಅಂತಿಮ.

## ಆದೇಶ

ಪಿರ್ಯಾದಿ ಪರ ವಕೀಲರು ದಂಡ ಪ್ರಕ್ರಿಯ ಸಂಹಿತೆ ಕಲಂ 311 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು 200/-ರೂ.ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

ಅದರಂತೆ, ಪಿರ್ಯಾದಿಯು ಅರ್ಜಿಯ ಜೊತೆ ಸಲ್ಲಿಸಿರುವ ಪಹಣಿ ಪತ್ರಿಕೆಗಳನ್ನು ಕಡತಕ್ಕೆ ತೆಗೆದುಕೊಂಡು ಪಿ.ಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಗೆ ಪ್ರಕರಣವನ್ನು ತೆರೆಯಲಾಗಿದೆ.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 16 ನೇ ಜುಲೈ 2024 ರಂದು ನಾನು ಉದ್ಘೋಷಿಸಿದ್ದೇನೆ)*

**(ಕೆ.ಪಿ. ಸಿದ್ಧಪ್ಪಾಜಿ)**
ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು ನಾಗಮಂಗಲ.